ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-560001**

ಸಂಖ್ಯೆ: ಜಂ.ನಿ(ಆಡಳಿತ) ಖಾಯಂ.ಪೂ.ಸೇ.ಘೋ/1/2021-22 ದಿನಾಂಕ : 08/11/2022

**ಜ್ಞಾಪನ**

ವಿಷಯ : ಇಲಾಖೆಯ ವಿವಿಧ ಕಛೇರಿಗಳಲ್ಲಿನ ಅಧೀಕ್ಷಕರುಗಳಿಗೆ ವಿಷಯ ಪರಿಣಿತಿಯ ಪರೀಕ್ಷಣೆಗೆ ತರಬೇತಿ ಮತ್ತು ಲಿಖಿತ ಪರೀಕ್ಷೆಯನ್ನು ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ : 1. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ5(7) ಖಾ.ಪೋ.ಸೇ.ಘೋ.ಕು:2021-22 ದಿನಾಂಕ:04-01-2022.
2. ದಿನಾಂಕ : 05-11-2022ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಪುನರಾವಲೋಕನ ಸಭೆಯಲ್ಲಿನ ಸೂಚನೆ.

~ ~ ~

ವಿಷಯಕ್ಕೆ ಸಂಬಂಧಿಸಿದಂತೆ, ಇಲಾಖಾ ವ್ಯಾಪ್ತಿಯಲ್ಲಿನ ವಿವಿಧ ಹಂತದ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧೀಕ್ಷಕರುಗಳು, ಆಡಳಿತ ನಿರ್ವಹಣೆಯಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ತೊಡಗಿಕೊಳ್ಳಲು ಅನುವಾಗುವಂತೆ, ಆಯಾ ಶಾಖೆಗಳಲ್ಲಿ ನಿರ್ವಹಣೆಯಾಗುವ ವಿಷಯಗಳು ಮತ್ತು ಸಾಮಾನ್ಯ ಆಡಳಿತ ವಿಷಯಗಳಲ್ಲಿ ಸಿಬ್ಬಂದಿಗಳು ಹೊಂದಿರುವ ಜ್ಞಾನ ಮತ್ತು ಪರಿಣತಿಯನ್ನು ಕಾಲದಿಂದ ಕಾಲಕ್ಕೆ ಪರೀಕ್ಷಿಸುವುದು ಸೂಕ್ತ.

ಇದರಿಂದ ಸಹಾಯಕ ಸಿಬ್ಬಂದಿಗಳು ಮಂಡಿಸುವ ವಿಷಯಗಳ ಕಡತ ನಿರ್ವಹಣೆಯಲ್ಲಿ ವಿಷಯ ಜ್ಞಾನವನ್ನು ಹೆಚ್ಚಿಸಿಕೊಂಡು ಸಮಂಜಸ ಮತ್ತು ಯುಕ್ತ ಪಾತ್ರವನ್ನು ವಹಿಸಲು ಪ್ರೇರೇಪಿಸುವುದು ಸಾಧ್ಯವಾಗುತ್ತದೆ. ಕೇಂದ್ರ ಕಛೇರಿಗಳು, ವಿಭಾಗೀಯ ಕಛೇರಿಗಳು, ಜಿಲ್ಲಾ ಕಛೇರಿಗಳು ಮತ್ತು ತಾಲ್ಲೂಕು ಹಂತಗಳಲ್ಲಿನ ಕಛೇರಿಗಳ ಆಡಳಿತದಲ್ಲಿ ಮತ್ತಷ್ಟು ಸುಧಾರಣೆ ಮತ್ತು ಚುರುಕುತನ ಬರಲಿದೆ. ಅಧೀಕ್ಷಕ ವೃಂದದ ಸಿಬ್ಬಂದಿಗಳು, ಅಧೀನದ ವಿಷಯ ನಿರ್ವಾಹಕರುಗಳಿಗೆ ಅಗತ್ಯ ಮಾರ್ಗದರ್ಶನವನ್ನು ನೀಡುವ ಅಧಿಕಾರಿಯಾಗಿದ್ದು, ಕಛೇರಿ ಕಾರ್ಯ ನಿರ್ವಹಣೆಯಲ್ಲಿ ಅಧೀಕ್ಷಕರ ಪಾತ್ರ ಮಹತ್ವದಾಗಿರುತ್ತದೆ. ಪ್ರಯುಕ್ತ ಕಾಲಿಕವಾಗಿ, ಪ್ರತೀ ಮಾಹೆ, ತಮ್ಮ ವ್ಯಾಪ್ತಿಯ ಎಲ್ಲಾ ಕಛೇರಿ / ಶಾಖೆಗಳಲ್ಲಿನ ಅಧೀಕ್ಷಕರುಗಳಿಗೆ ಆಯಾ ಡಯಟ್ ವತಿಯಿಂದ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು, ಉಪ ನಿರ್ದೇಶಕರ ಸಹಕಾರದೊಂದಿಗೆ ಡಯಟ್ ಕಛೇರಿಗಳಲ್ಲಿ ಸೂಕ್ತ ತರಬೇತಿಯನ್ನು ನೀಡಿ ನಂತರದಲ್ಲಿ ಕಾರ್ಯಕ್ಷಮತೆ ಪರೀಕ್ಷೆಯನ್ನು ಹಮ್ಮಿಕೊಳ್ಳಲು ತಿಳಿಸಿದೆ.

ಸದರಿ ಲಿಖಿತ ಪರೀಕ್ಷೆಗೆ ಸಂಬಂಧಿಸಿದಂತೆ ಈಗಾಲೇ ಒದಗಿಸಿದ ಪಠ್ಯಕ್ರಮದಂತೆ ಹಾಗೂ ಸರ್ಕಾರದ ಆದೇಶಗಳು/ಇಲಾಖಾ ನಿಯಮ/ ಅಧಿಸೂಚನೆಗಳ ಕುರಿತಂತೆ ಅಧೀಕ್ಷಕರುಗಳಲ್ಲಿ ಇರುವ ಪರಿಣತಿಯನ್ನು ಮತ್ತು ಸಾಮಾನ್ಯ ಆಡಳಿತ ವಿಷಯಗಳಲ್ಲಿ ಇರುವ ಪರಿಣತಿಯನ್ನು ಪರೀಕ್ಷಿಸಲು ಪ್ರಶ್ನೆ ಪತ್ರಿಕೆಯನ್ನು 100 ಅಂಕಗಳಿಗೆ ತಯಾರಿಸಿ ಪರೀಕ್ಷೆಯನ್ನು ಹಮ್ಮಿಕೊಂಡು, ಮೌಲ್ಯಮಾಪನ ನಡೆಸಿ, ಅಧೀಕ್ಷಕರುಗಳು ಹೊಂದಿರುವ ವಿಷಯ ಪರಿಣತಿ ಕುರಿತು ವರದಿಯನ್ನು ಆಯಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಸಲ್ಲಿಸಲು ತಿಳಿಸಿದೆ. ವಿಭಾಗೀಯ ಸಹನಿರ್ದೇಶಕರುಗಳು ಸದರಿ ಪರೀಕ್ಷೆಯ ಮೇಲುಸ್ತುವಾರಿಯನ್ನು ಕೈಗೊಂಡು ಪ್ರತೀ ಮಾಹೆ ಕ್ರೋಢೀಕೃತ ವರದಿಯನ್ನು ಈ ಕಛೇರಿಗೆ ಸಲ್ಲಿಸುವುದು.

ಪ್ರಯುಕ್ತ ಮಾಸಿಕ ಅವಧಿಯ ಪರೀಕ್ಷಣೆಯನ್ನು ಕೂಡಲೇ ಹಮ್ಮಿಕೊಂಡು ದಿನಾಂಕ : 25-11-2022 ರೊಳಗಾಗಿ ವರದಿ ಸಲ್ಲಿಸಲು ಸೂಚಿಸಿದೆ. ಯಾವುದೇ ಅಧೀಕ್ಷಕರುಗಳು ಪರೀಕ್ಷೆಗೆ ಗೈರುಹಾಜರಾಗುವಂತಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು. ಪರೀಕ್ಷೆ ಹಮ್ಮಿಕೊಳ್ಳಬಹುದಾದ ಮಾದರಿ ಪಠ್ಯವಸ್ತು/ವಿಧಾನದ ಕುರಿತಂತೆ ಉಲ್ಲೇಖಿತ ಜ್ಞಾಪನ/ಸುತ್ತೋಲೆ ಅಂಶಗಳನ್ನು ಗಮನಿಸತಕ್ಕದ್ದು. ಅನಗತ್ಯ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

R

**ಡಾ.ವಿಶಾಲ್.ಆರ್. ಭಾ.ಆ.ಸೇ**
**ಆಯುಕ್ತರು**

**ಗೆ,**

1. ಸಹ ನಿರ್ದೇಶಕರು (ಆಡಳಿತ), ಸಮಗ್ರ ಶಿಕ್ಷಣ ಕರ್ನಾಟಕ/ ಅಪರ ಆಯುಕ್ತರ ಕಛೇರಿ, ಕಲ್ಬುರ್ಗಿ/ ಧಾರವಾಡ
2. ವಿಭಾಗೀಯ ಸಹ ನಿರ್ದೇಶಕರು ಮೈಸೂರು, ಕಲ್ಬುರ್ಗಿ ಮತ್ತು ಧಾರವಾಡ
3. ಪ್ರಾಂಶುಪಾಲರು, ಸಿಟಿಇ, ಕಲ್ಬುರ್ಗಿ/ಬೆಳಗಾವಿ/ಜಮಖಂಡಿ/ ಮೈಸೂರು/ಚಿತ್ರದುರ್ಗ/ ಮಂಗಳೂರು
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಅಭಿವೃದ್ಧಿ

<u>ಪ್ರತಿಯನ್ನು ಮಾಹಿತಿಗಾಗಿ</u>:-

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲ್ಬುರ್ಗಿ ಮತ್ತು ಧಾರವಾಡ
3. ಮಾನ್ಯ ಆಯುಕ್ತರ ಆಪ್ತ ಶಾಖೆಗೆ.
4. ಜಂಟಿನಿರ್ದೇಶಕರು (ಆಡಳಿತ) ರವರ ಆಪ್ತ ಶಾಖೆಗೆ
5. ಕಛೇರಿ ಪ್ರತಿ.